**ಸಾಕ್ಷಿಯನ್ನು ದಿನಾಂಕ: 18-02-2026 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀಸವಾಲು ವಾದಿ ಪರ ವಕೀಲರಾದ ಶ್ರೀ AMK ರವರಿಂದ**

**1.** ವಾದಿಯ ಪರಿಚಯ ನನಗೆ ಇರುವುದಿಲ್ಲ. 2008 ನೇ ಸಾಲಿನಲ್ಲಿ ನನಗೆ ಕರಾರು ಪತ್ರ ಬರೆದುಕೊಟ್ಟಾಗಿನಿಂದ ಪ್ರತಿವಾದಿ 1 ರಿಂದ 3 ರವರ ಪರಿಚಯ ನನಗೆ ಇರುತ್ತೆ. ವಾದಿಯು ಸ.ನ. 33/2 ಕ್ಕೆ ಸಂಬಂಧಿಸಿದಂತೆ ಈ ದಾವೆಯನ್ನು ಸಲ್ಲಿಸಿರುತ್ತಾರೆ. ಸದರಿ ಸ.ನ. ಒಟ್ಟು 4 ಎಕರೆ 20 ಗುಂಟೆ ಇರುತ್ತದೆ. ದಾವಾ ಆಸ್ತಿ ಮೊದಲಿಗೆ ಹನುಮಂತಯ್ಯನ ಹೆಂಡತಿ ಈರಮ್ಮರವರಿಗೆ ಸೇರಿದ್ದಾಗಿರುತ್ತದೆ ಎಂದರೆ ಸರಿ. ಸದರಿ ಈರಮ್ಮರವರು ದಿಃ 25.08.1975 ರ ಕ್ರಯಪತ್ರದ ಮೂಲಕ ಕ್ರಯಕ್ಕೆ ಪಡೆದಿರುತ್ತಾರೆಂದರೆ ಸರಿ. ಸದರಿ ಈರಮ್ಮರವರು ದಿಃ 24.04.2008 ರಂದು 2 ಮತ್ತು 3 ನೇ ಪ್ರತಿವಾದಿಗೆ ವಿಲ್ ನ್ನು ಬರೆದಿರುತ್ತಾರೆಂದರೆ ಸರಿ. ಸದರಿ ವಿಲ್ ನಲ್ಲಿ 2 ನೇ ಪ್ರತಿವಾದಿಗೆ 1 ಎಕರೆ 27 ಗುಂಟೆ ಮತ್ತು 3 ನೇ ಪ್ರತಿವಾದಿಗೆ 2 ಎಕರೆ 27 ಗುಂಟೆ ಎಂದು ಕಾಣಿಸಿರುತ್ತಾರೆ.

2. ಕಂತೆವಡೇರಹಳ್ಳಿ ಗ್ರಾಮದಲ್ಲಿ ನನಗೆ ಸೇರಿದ ಬೇರೆ ಜಮೀನು ಇರುವುದಿಲ್ಲ. ಪ್ರತಿವಾದಿ 1 ರಿಂದ 3 ರವರ ಕುಟುಂಬದ ಪರಿಸ್ಥಿತಿ ಬಗ್ಗೆ ನನಗೆ ಗೊತ್ತಿಲ್ಲ. ಪ್ರತಿವಾದಿ 1 ರಿಂದ 3, ಈರಮ್ಮ ಚಿಕ್ಕಹನುಮಕ್ಕ, ರತ್ನಮ್ಮರವರು ನನಗೆ ಕರಾರು ಪತ್ರವನ್ನು ಬರೆದುಕೊಟ್ಟಿರುತ್ತಾರೆ. ಸ.ನಂಬರ್ ಪೋಡಾಗಿ ಖಾತೆ ಆಗದೇ ಇರುವ ಕಾರಣ ಕರಾರು ಪತ್ರವನ್ನು ನೊಂದಾವಣೆ ಮಾಡಿಸಿರುವುದಿಲ್ಲ. ಕರಾರು ಪತ್ರ ಬರೆದುಕೊಟ್ಟಾಗ ದಾವಾ ಆಸ್ತಿಯ ಖಾತೆ ಪಹಣಿ ಈರಮ್ಮ, ತಿಮ್ಮನಾಗಯ್ಯ, ಹನುಮಂತಯ್ಯ, ನರಸಹನುಮಯ್ಯರವರ ಹೆಸರಿನಲ್ಲಿತ್ತು. ಖಾತೆ ಬದಲಾವಣೆ ಮಾಡಿಸಿಕೊಳ್ಳಲು ಮತ್ತು ಕ್ರಯಪತ್ರ ನೊಂದಾವಣೆ ಮಾಡಿಸಿಕೊಳ್ಳಲು ನಾನು ಪ್ರಯತ್ನ ಪಟ್ಟಿರುತ್ತೇನೆ. ಕರಾರು ಪತ್ರ ಬರೆದುಕೊಟ್ಟಾಗಿನಿಂದಲೂ ನಾನು ಮತ್ತು 1 ನೇ ಪ್ರತಿವಾದಿ ವಿಶ್ವಾಸದಿಂದ ಇದ್ದೆವು ಎಂದರೆ ಸರಿಯಲ್ಲ. ಖಾತೆ ಬದಲಾವಣೆ ಮಾಡಿಸಿಕೊಂಡು ನೊಂದಾವಣೆ ಪತ್ರ ನನ್ನ ಹೆಸರಿಗೆ ಬರೆದುಕೊಡದೇ ಇರುವ ಕಾರಣ 2009 ನೇ ಸಾಲಿನಿಂದ ನನ್ನ 1 ನೇ ಪ್ರತಿವಾದಿಯ ನಡುವೆ ವಿಶ್ವಾಸ ಇವುದಿಲ್ಲ. ದಾವಾ ಆಸ್ತಿಯ ಖಾತೆ ಮತ್ತು ಪಹಣಿ 2 ಮತ್ತು 3 ನೇ ಪ್ರತಿವಾದಿ ಹೆಸರಿಗೆ 2019 ನೇ ಸಾಲಿನಲ್ಲಿ ಬದಲಾವಣೆ ಆಗಿರುತ್ತದೆ. ನಾನು ದಾವೆಯನ್ನು ದಾಖಲೆ ಮಾಡುವ ಮೊದಲು ಪ್ರತಿವಾದಿ 1 ರಿಂದ 3 ರವರಿಗೆ ನೋಟೀಸನ್ನು ನೀಡಿರುವುದಿಲ್ಲ, ಮೌಖಿಕವಾಗಿ ಕೇಳಿರುತ್ತೇನೆ. ಪ್ರತಿವಾದಿ 1 ರಿಂದ 3 ರವರ ವಿರುದ್ಧ ನಾನು ಪೊಲೀಸ್ ಠಾಣೆಯಲ್ಲಿ ದೂರನ್ನು ನೀಡಿರುವುದಿಲ್ಲ. ನನ್ನ ಹೆಸರಿಗೆ ಆದ ಕರಾರು ಪತ್ರವನ್ನು ನ್ಯಾಯಾಲಯಕ್ಕೆ ಬಿಟ್ಟು ಬೇರೆ ಕಡೆ ಸಲ್ಲಿಸಿರುವುದಿಲ್ಲ. ಕರಾರು ಪತ್ರದ

ಛಾಪಾ ಕಾಗದವನ್ನು ಈರಮ್ಮರವರು ತಂದಿರುತ್ತಾರೆ ಅವರು ಎಲ್ಲಿಂದ ಯಾವ ಬ್ಯಾಂಕಿನಿಂದ ತಂದಿರುತ್ತಾರೆಂದು ನನಗೆ ಗೊತ್ತಿಲ್ಲ. ಕರಾರು ಪತ್ರದಲ್ಲಿ ಬರೆದಿರುವ ವಿಚಾರಗಳು ನನಗೆ ನೆನಪಿರುತ್ತದೆ. ನಾನು ಹಣಕಾಸಿನ ವ್ಯವಹಾರವನ್ನು ಬ್ಯಾಂಕಿನ ಮೂಲಕ ಮತ್ತು ನಗದಾಗಿ ಮಾಡುತ್ತೇನೆ. ಪ್ರತಿವಾದಿ 1 ರಿಂದ 3 ಮತ್ತು ಈರಮ್ಮರವರಿಗೆ ನಾನು ನಗದಾಗಿ 4 ಲಕ್ಷ ಮತ್ತು ಚೆಕ್ ನ ಮೂಲಕ 27 ಸಾವಿರ ಹಣವನ್ನು ನೀಡಿರುತ್ತೇನೆ. ಈರಮ್ಮರವರು ಮೃತಪಟ್ಟ ನಂತರ 1 ಲಕ್ಷ ರೂ ಹಣವನ್ನು ಕೊಟ್ಟಿರುತ್ತೇನೆ. ಈರಮ್ಮರವರು 2008-09 ನೇ ಸಾಲಿನಲ್ಲಿ ಮೃತಪಟ್ಟಿರುತ್ತಾರೆ. ಕರಾರು ಪತ್ರವನ್ನು ಬರೆದುಕೊಟ್ಟ ಸಮಯದಲ್ಲಿ 3 ನೇ ಪ್ರತಿವಾದಿ ಅಪ್ರಾಪ್ತ ವಯಸ್ಕನಾಗಿದ್ದ. ಆ ಕಾಲಕ್ಕೆ 2 ನೇ ಪ್ರತಿವಾದಿ ಪ್ರಾಪ್ತ ವಯಸ್ಕರಾಗಿದ್ದರು. ಪ್ರತಿವಾದಿ 2 ಮತ್ತು 3 ರವರು ಕರಾರು ಪತ್ರಕ್ಕೆ ಸಹಿಗಳನ್ನು ಮಾಡಿರುತ್ತಾರೆ. ನನ್ನ ಹೆಸರಿಗೆ ಕರಾರು ಪತ್ರವನ್ನು ಬರೆದುಕೊಡುವ ಕಾಲಕ್ಕೆ ಪ್ರತಿವಾದಿ 2 ಮತ್ತು 3 ರವರು ಅಪ್ರಾಪ್ತ ವಯಸ್ಕರಾಗಿರುತ್ತಾರೆಂದು ಈರಮ್ಮರವರು ನನಗೆ ಹೇಳಿರುತ್ತಾರೆ. ಪ್ರತಿವಾದಿ 2 ಮತ್ತು 3 ರವರ ಹಿತಾಸಕ್ತಿ ಸಲುವಾಗಿ ಕರಾರು ಪತ್ರವನ್ನು ಬರೆದುಕೊಡುವುದಾಗಿ ಸದರಿ ಕರಾರುಪತ್ರದಲ್ಲಿ ಈರಮ್ಮರವರು ಬರೆಸಿರುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ. ಬಾಕಿ ಹಣವನ್ನು ನೊಂದಾವಣಿ ಕ್ರಯ ಪತ್ರ ಬರೆದುಕೊಡುವ ಸಮಯದಲ್ಲಿ ಕೊಡುವುದಾಗಿ ಕರಾರು ಪತ್ರದಲ್ಲಿ ಬರೆದಿತ್ತು. ಕರಾರು ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

2. ಕರಾರು ಪತ್ರದ ಆಧಾರದ ಮೇಲೆ ನಾನು 2016 ನೇ ಸಾಲಿನಲ್ಲಿ ದಾವೆಯನ್ನು ಸಲ್ಲಿಸಿರುತ್ತೇನೆ. 2014 ಮತ್ತು 15 ನೇ ಸಾಲಿನಲ್ಲಿ ನಾನು ಕರಾರು ಪತ್ರವನ್ನು ಬರೆದುಕೊಡುವಂತೆ ಪ್ರತಿವಾದಿ 2 ಮತ್ತು 3 ರವರಿಗೆ ಕೇಳಿರುತ್ತೇನೆ. ಅದನ್ನು ಬಿಟ್ಟು ಬೇರೆ ವಿಚಾರವನ್ನು ಪ್ರತಿವಾದಿ 1 ರವರ ಬಳಿ ಮಾತನಾಡುತ್ತಿರಲಿಲ್ಲ. ಈ ದಾವೆಯನ್ನು ಸಲ್ಲಿಸಿರುವ ಕಾರಣ ನನ್ನ ಹೆಸರಿಗೆ ಕ್ರಯ ಪತ್ರವನ್ನು ಬರೆದುಕೊಡಲು ಆಗುವುದಿಲ್ಲ ಎಂದು ಪ್ರತಿವಾದಿ 2 ಮತ್ತು 3 ರವರು ನನಗೆ ತಿಳಿಸಿರುವುದಿಲ್ಲ. ನಾನು ಸಲ್ಲಿಸಿರುವ ದಾವೆಯಲ್ಲಿ ಪ್ರತಿವಾದಿ 1 ರಿಂದ 3 ರವರು ಹಾಜರಾಗಿ ಕರಾರು ಪತ್ರದ ಬಗ್ಗೆ 2018 ನೇ ಸಾಲಿನಲ್ಲಿ ಒಪ್ಪಿಕೊಂಡಿರುತ್ತಾರೆ. ಸದರಿ ದಾವೆಯಲ್ಲಿ ಸ.ನ. ಪೋಡಾಗಿ ದಾಖಲೆಗಳು ಬದಲಾವಣೆ ಆದ ನಂತರ ಕ್ರಯ ಪತ್ರ ಬರೆದುಕೊಡುವುದಾಗಿ ಪ್ರತಿವಾದಿ 1 ರಿಂದ 3 ರವರು ಒಪ್ಪಿಕೊಂಡಿರುತ್ತಾರೆ. ರಾಜಿ ಡಿಕ್ರಿ ಆಧಾರದ ಮೇಲೆ ನಾನು ಅಮಲ್ ಜಾರಿ ಪ್ರಕರಣವನ್ನು ದಾಖಲು ಮಾಡಿರುವುದಿಲ್ಲ.

3. ಪ್ರತಿವಾದಿ 1 ರಿಂದ 3 ರವರ ಸಹಿಗಳನ್ನು ನೋಡಿದರೆ ನಾನು ಗುರುತಿಸಬಲ್ಲೆ. ನಿಪಿ-1(ಎ) ಯಿಂದ ನಿಪಿ-1(ಎನ್) ಪ್ರತಿವಾದಿ 1 ರಿಂದ 3 ರವರ ಸಹಿಗಳಾಗಿರುತ್ತವೆ. ಪ್ರತಿವಾದಿ 1 ರಿಂದ 3 ರವರು

ವಾದಿಗೆ ದಿಃ 04.02.2011 ರಂದು ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟಿರುತ್ತಾರೆಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತನ್ನು 4 ಲಕ್ಷ ರೂಗಳಿಗೆ ಮಾರಾಟ ಮಾಡುವುದಾಗಿ ಹೇಳಿ ಮುಂಗಡವಾಗಿ 3 ಲಕ್ಷ 75 ಸಾವಿರ ರೂಗಳನ್ನು ದಿಃ 04.02.2011 ರಂದು ಪ್ರತಿವಾದಿ 1 ರಿಂದ 3 ರವರು ಪಡೆದಿರುತ್ತಾರೆಂದರೆ ನನಗೆ ಗೊತ್ತಿಲ್ಲ. ನಿಪಿ-1 ರ ಬಗ್ಗೆ ಮತ್ತು ಈ ದಾವೆಯನ್ನು ಸಲ್ಲಿಸಿರುವ ವಿಚಾರ ಪ್ರತಿವಾದಿಗಳು ನನಗೆ ತಿಳಿಸಿದ್ದರು ಎಂದರೆ ಸರಿಯಲ್ಲ. ಈ ದಾವೆಯನ್ನು ದಾಖಲಿಸಿದ ನಂತರ ನಾನು ಪ್ರತಿವಾದಿ 1 ರಿಂದ 3 ರವರು ಸೇರಿಕೊಂಡು ನನ್ನ ಹೆಸರಿನಲ್ಲಿ ಕ್ರಯದ ಕರಾರು ಪತ್ರವನ್ನು ಸೃಷ್ಟಿ ಮಾಡಿರುತ್ತೇವೆಂದರೆ ಸರಿಯಲ್ಲ. ಪ್ರತಿವಾದಿ 1 ರಿಂದ 3 ರವರು ಹಣಕಾಸಿನ ಅವಶ್ಯಕತೆ ಇತ್ತು ಎಂದರೆ ಈರಮ್ಮರವರಿಗೆ ಹಣಕಾಸಿನ ಅವಶ್ಯಕತೆ ಇತ್ತು. ಪ್ರತಿವಾದಿ 1 ರಿಂದ 3 ರವರಿಗೆ ಹಣಕಾಸಿನ ಅವಶ್ಯಕತೆ ಇದ್ದ ಕಾರಣ ದಾವಾ ಆಸ್ತಿಯನ್ನು ಮಾರಾಟ ಮಾಡುವುದಾಗಿ ಹೇಳಿ ನಿಪಿ-1 ನ್ನು ಪ್ರತಿವಾದಿ 1 ರಿಂದ 3 ರವರು ಬರೆದುಕೊಟ್ಟಿರುತ್ತಾರೆಂದರೆ ಸರಿಯಲ್ಲ. ವಾದಿಗೆ ಮೋಸ ಮಾಡುವ ಉದ್ದೇಶದಿಂದ ನಾನು 2008 ರಲ್ಲಿ ಕ್ರಯದ ಕರಾರು ಪತ್ರವನ್ನು ಸೃಷ್ಟಿ ಮಾಡಿಕೊಂಡು 2016 ರವರೆಗೂ ನಾನು ಏನೂ ಕ್ರಮ ಕೈಗೊಳ್ಳದೆ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ನಾನು ಪ್ರತಿವಾದಿ 1 ರಿಂದ 3 ಹಾಗೂ ಈರಮ್ಮರವರಿಗೆ 4 ಲಕ್ಷ ನಗದು ಹಾಗೂ ಚೆಕ್ ಮೂಲಕ 27 ಸಾವಿರ ರೂಗಳನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. 2019 ನೇ ಸಾಲಿನಿಂದ ದಾವಾ ಆಸ್ತಿಯಲ್ಲಿ ನಾನು ಸ್ವಾಧೀನದಲ್ಲಿರುತ್ತೇನೆ ಮತ್ತು ಖಾತೆ ಪಹಣಿ ನನ್ನ ಹೆಸರಿನಲ್ಲಿರುತ್ತದೆ. ವಾದಿಗೆ ತೊಂದರೆ ನೀಡುವ ಸಲುವಾಗಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ.ಕೇ.ಸರಿ ಇದೆ.**

**ಸಿ.ಜೆ ಮತ್ತು ಜೆಎಂ.ಎಫ್ ಸಿ**
**ಕೊರಟಗೆರೆ**